“ಫಸ್ಟ್ ನಂಗೆ ತಾತಾ...” ಹೇರ್‌ಕಟಿಂಗಿಗೆ ಹೊರೆಟಿದ್ದ ನಾಲ್ಕರ ಪುಟಾಣಿ ಆರುಷ್ ಗೋಗರೆತ. “ಅವನಿಗಲ್ಲ ತಾತ, ನಂಗೆ ಫಸ್ಟ್...” ತಕರಾರು ತೆಗೆದ ಆರರ ಆರ್ಯ.

“ನಂಗೆ ಫಸ್ಟ್...” “ಇಲ್ಲ ನಂಗೆ ಫಸ್ಟ್...” ರಸ್ತೆಯಲ್ಲೇ ಕಾಲರ್ ಹಿಡಿದು, ಕೈಕೈ ಮಿಲಾಯಿಸ ತೊಡಗಿದವು ಶುದ್ಧ ತರ್ಲೆಗಳು! ಪರಿಸ್ಥಿತಿ ಕೈ ಮೀರುವ ಮುನ್ನ ನಿಯಂತ್ರಿಸಲು ಸನ್ನದ್ಧನಾಗಿ ಇಬ್ಬರನ್ನೂ ಆಚೆಈಚೆ ಎಳೆದು ಮಧ್ಯೆ ನಿಂತು, “ಸುಮ್ಮಸುಮ್ನೆ ಯಾಕೋ ಜಗಳ ತೆಗಿತೀಯಾ ಆರ್ಯ? ಆರುಷ್ ಸಣ್ಣವನಲ್ವಾ? ಅವ್ನಿಗೆ ಮೊದಲು, ಆ ಮೇಲೆ ನಿಂಗೆ...”

“ಇಲ್ಲ... ಇಲ್ಲಾ... ಅವ್ನಿಗಿಂತ ನಾನು ದೊಡ್ಡವ, ಫಸ್ಟ್ ಸ್ಟ್ಯಾಂಡರ್ಡ್ ಬೇರೆ, ಅವನಿನ್ನೂ ಯುಕೆಜಿಯಲ್ವಾ?” ಹಕ್ಕೊತ್ತಾಯ ಮಂಡಿಸಿದ ಪೋರ. ಮಕ್ಕಳೂ ಕೆಲವೊಮ್ಮೆ ವಯಸ್ಸಿಗೆ ಮೀರಿ ಎಗ್ಗಿಲ್ಲದೇ ಲಾ ಪಾಯಿಂಟ್ ಹಾಕಿ ಮಾತು ಉಡಾಯಿಸಿಬಿಡುತ್ತವೆ. ಚಿಕ್ಕವರಾಗಿದ್ದಾಗ ನಾವು ಇಂತಹ ಮಾತಾಡಿದರೆ, ಹಿರಿಯರು ಕೂಡ್ಲೆ ಕಪಾಳಕ್ಕೆ ಬಿಗಿದು, “ಬಾಯಿ ಮುಚ್ಚಿಕೊಂಡು ಕುಕ್ಕರಿಸೋ” ಎಂದು ಬಗ್ಗು ಬಡಿಯುತ್ತಿದ್ದರು! ಮಲೆನಾಡಿನ ಮೂಲೆಯಲ್ಲಿ ಹುಟ್ಟಿದ ನನ್ನ, ಬೆಂಗಳೂರು ಸಿಟಿಯಲ್ಲಿ ಬೆಳೆಯುತ್ತಿರುವ ಮೊಮ್ಮಕ್ಕಳ ಬಾಲ್ಯಕ್ಕೂ ಎಷ್ಟೊಂದು ಫರಕು! ಪರಿಸರ ಮಾತ್ರವಲ್ಲ, ಕಾಲಘಟ್ಟವೇ ಬೇರೆ! ಆಚಾರ ವಿಚಾರ, ರೀತಿ ರಿವಾಜು ಎಲ್ಲವೂ ಬೇರೆಬೇರೆ! ಹೇರ್‌ಕಟಿಂಗಿಗೆ ಹೊರಟ ಕಿಲಾಡಿಗಳ ಸಂಭ್ರಮ ನೋಡಿ ಆಶ್ಚರ್ಯ. ಅವರ ವಯಸ್ಸಿನಲ್ಲಿ ನಾವು ಕ್ಷೌರ ಮಾಡಿಸಲು ಹೀಗೆ ಖುಷಿ ಖುಷಿಯಾಗಿ ಕುಣಿಯುತ್ತಾ ಹೊರಟದ್ದುಂಟೇ!?...

ಹಾಡಿ ಮನೆ. ಎದುರಿನ ಗಾಡಿ ಓಣಿಯ ಉಣಗೋಲು ಸರಿಸಿ, ಬಲಗೈಯಲ್ಲಿ ಬೀಡಿ ಎಳೆಯುತ್ತಾ, ಬಾಯಿ ಕುಲುಮೆಯಿಂದ ಹೊಗೆ ಕಾರುತ್ತಾ, ಎಡಗೈಯಲ್ಲಿ ಕಿಲುಬುಗಟ್ಟಿದ ಹಿತ್ತಾಳೆ ಪೆಟ್ಟಿಗೆ ಹಿಡಿದ ಚೌರದ ತಮ್ಮು, ಅಂಗಳಕ್ಕೆ ಕಾಲಿಟ್ಟಿದ್ದ ಕಂಡರೆ ಸಾಕು, ಆಟವಾಡುತ್ತಿದ್ದ ಅವಿಭಕ್ತ ಕುಟುಂಬದ ನಮ್ಮ ಪುಂಡರಪಡೆ ಬೆಚ್ಚಿ, “ಶನಿ ಬಂತು, ಚೌರದ ಶನಿ ಬಂತು” ಬೊಬ್ಬಿರಿಯುತ್ತಾ ದಿಕ್ಕಾಪಾಲು! ಓಡೋಡಿ ಬದಿಕೋಣೆ ಕತ್ತಲಲ್ಲೋ, ಉಪ್ಪರಿಗೆ ಮೇಲೆ ಮಂಚದಡಿ, ಪೇರಿಸಿಟ್ಟ ಹಾಸಿಗೆ ಮರೆ, ನಡುಮನೆ ದೇವರ ಮಂಟಪದ ಹಿಂಬದಿ, ಪಣತದ ಕೊಟ್ಟಿಗೆ ಸಂದಿ—ಒಬ್ಬಬ್ಬರೂ ಒಂದೊಂದು ಮೂಲೆ ಕದ್ದಡಗಿ ಮೈಯೆಲ್ಲಾ ಕಣ್ಣಾಗಿಸಿಕೊಂಡು ಬಿಗಿಹಿಡಿದು ಉಸಿರಾಡುತ್ತಿದ್ದೆವು.

ಭಾನುವಾರದ ಬೆಂಗಳೂರು, “ದಿಲ್‌ಖುಷ್ ಹೇರಕಟ್ಟಿಂಗ್ ಸಲೂನ್” ಎ.ಸಿ. ಹಾಲ್ ರಷ್ಯೋರಷ್ಯು. ಕಾಯುವುದು ಅನಿವಾರ್ಯ. ಎತ್ತರದ ಆರೇಳು ತಿರುಗು ಕುರ್ಚಿ. ಎದುರು ಮುಖ, ಹಿಂಬದಿ ತಲೆ ಒಂದರ ಹಿಂದೊಂದು, ಒಂದರೊಳಗಿನ್ನೊಂದು ತಲೆ ತಲಾಂತರ ಬಿಂಬ ಪ್ರತಿಬಿಂಬಿತವಾಗುವ ವಿಶಾಲ ಬೆಲ್ಜಿಯಂ ಕನ್ನಡಿ. ನಡುವೆ ಎದ್ದು ಕಾಣುವ ನಾನಾ ಬಗೆಯ ಸೇವಾ ಸೌಲಭ್ಯಗಳ ವಿವರದೊಂದಿಗೆ ರೇಟ್‌ಲೀಸ್ಟ್. ಕಣ್ಣು ಹಾಯಿಸುತ್ತಾ ಹೋದೆ. ಕಟ್ಟಿಂಗ್ – ನೂರೈವತ್ತು, ಶೇವಿಂಗ್ – ಎಪ್ಪತ್ತೈದು ಇತ್ಯಾದಿ, ಇತ್ಯಾದಿ ಆಗುತ್ತಿದ್ದ ಮೊತ್ತ ಮೂರೂವರೆ ಸಾವಿರ! ಮೂಲೆಸ್ಟ್ಯಾಂಡ್ ಮೇಲೆ ಟೀವಿ, ಎಡಬಿಡದೇ ಡ್ಯಾನ್ಸ್ ಮಾಡುತ್ತಾ ಬೊಬ್ಬಿರಿಯುವ ಇಂಗ್ಲಿಷ್ ಸಿನಿಮಾ ಹಾಡು. ಸರದಿ ಕಾಯುತ್ತಾ ಕುಳಿತ ಗಿರಾಕಿಗಳು. ಹೊತ್ತು ಕಳೆಯಲೆಂದೇ ಕೆಲವರ ಕೈಯಲ್ಲಿ ಹಿಡಿದ ಪೇಪರ್, ಸಿನಿ ಮ್ಯಾಗ್‌ಜೈನ್. ಎತ್ತರ ಕುರ್ಚಿಯಲ್ಲಿ ಕತ್ತಿನ ತನಕ ರಕ್ಷಾಧಾರಿಗಳಾಗಿ ಕಟ್ಟಿಂಗ್, ಶೇವ್, ಡೈ, ಫೇಸ್‌ಬ್ಲೀಚ್, ಕಲರಿಂಗ್, ಗಡ್ಡ ಟ್ರಿಂ ಮಾಡಿಸಿಕೊಳ್ಳುವ ಗಿರಾಕಿಗಳ ವಿವಿಧ ರೀತಿಯ ತಪೋಭಾವಭಂಗಿ. ಥರಾವರಿ ವಾಟರ್‌ಸ್ಪ್ರೇಬಾಟಲ್, ಕತ್ತರಿ, ಹಣಿಗೆ, ರೇಜರ್, ಕ್ಲಿಪರ್ ಹಿಡಿದು ವೃತ್ತಿ ಕೈಚಳಕದಲ್ಲಿ ಪ್ರವೃತ್ತ ಕೇಶಕುಶಲಿಗಳು. ಕತ್ತರಿ ಕರಾಮತ್ತಿಗೆ ತಲೆನಂಟು ಕಚಕಚನೆ ಕತ್ತರಿಸಿ, ತತ್ತರಿಸಿ ಅನಾಥವಾಗಿ ಟೈಲ್ಸ್ ಮೇಲುದುರುವ ಕರಿ, ಬಿಳಿ, ನೆರೆತ ಕೂದಲು... ಅಕ್ಕಪಕ್ಕ ಕುಳಿತಿದ್ದ ಆರ್ಯ, ಆರುಷ್‌ರನ್ನು ನೋಡಿದೆ. ಕೇಶಕೌಶಲಿಗರ ಕೈಚಳಕದ ಚಮತ್ಕಾರಗಳನ್ನು